729 (904) **ಶ್ರೀ ಮೀರಾಜುದ್ದೀನ್ ಪಟೇಲ್ (ಹುಮ್ನಾಬಾದ್)** :– ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೀದರ್ ಜಿಲ್ಲೆ ರೈತರು ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿಗೆ ಹಣವನ್ನು ಕಳೆದ 3 ತಿಂಗಳಿನಿಂದ ನೀಡದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಯಾವ ಯಾವ ಕಾರ್ಖಾನೆಯನ್ನು ಎಷ್ಟು ತಿಂಗಳಿನಿಂದ ಬಾಕಿ ಉಳಿಸಿದ್ದಾರೆ (ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳ ವಿವರ ನೀಡುವುದು) ;

(ಇ) ರೈತರಿಗೆ ಸಕ್ಕರೆ ಕಾರ್ಖಾನೆಯವರು ಹಣ ಪಾವತಿಸದೆ ಕಂಗಾಲಾಗಿರುವುದು ನಿಜವೆ ;

(ಈ) ಬಾಕಿ ಹಣವನ್ನು ಯಾವಾಗ ಪಾವತಿ ಮಾಡಲಾಗುವುದು ?

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) :–

(ಅ) ಬಂದಿದೆ

(ಆ) ಬೀದರ್ ಜಿಲ್ಲೆಯ ಮೂರು ಸಹಕಾರಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಬೇಕಾದ ಕಬ್ಬಿನ ಬಾಕಿ ವಿವರ ಈ ಕೆಳಕಂಡಂತೆ ಇರುತ್ತದೆ.

ನಾರಾಂಜಾ ಸಹಕಾರಿ ಸಕ್ಕರೆ ಕಾರ್ಖಾನೆ :

ಒಟ್ಟು ಪಾವತಿಸಬೇಕಾದ ಮೊತ್ತ ರೂ. 62.96 ಕೋಟಿ. ಈಗಾಗಲೇ ಪಾವತಿಸಲಾದ ಮೊತ್ತ ರೂ. 40.03 ಕೋಟಿ ಬಾಕಿ ಪಾವತಿಸಬೇಕಾದ ಮೊತ್ತ ರೂ. 22.93 ಕೋಟಿ ಈ ಮೊತ್ತವು 16–02–2007 ರಿಂದ ಬಾಕಿ ಇರುತ್ತದೆ.

ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ :

ಒಟ್ಟು ಪಾವತಿಸಬೇಕಾದ ಮೊತ್ತ ರೂ. 52.24 ಕೋಟಿ. ಈಗಾಗಲೇ ಪಾವತಿಸಲಾದ ಮೊತ್ತ ರೂ. 26.57 ಕೋಟಿ ಬಾಕಿ ಪಾವತಿಸಬೇಕಾದ ಮೊತ್ತ ರೂ. 25.67 ಕೋಟಿ ಈ ಮೊತ್ತವು ಮಾರ್ಚ್ 2007 ರಿಂದ ಪಾವತಿಸಲು ಬಾಕಿ ಇರುತ್ತದೆ.

ಮಹಾತ್ಮ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ :

ಒಟ್ಟು ಪಾವತಿಸಬೇಕಾದ ಮೊತ್ತ ರೂ. 31.44 ಕೋಟಿ. ಈಗಾಗಲೇ ಪಾವತಿಸಲಾದ ಮೊತ್ತ ರೂ. 22.02 ಕೋಟಿ ಬಾಕಿ ಪಾವತಿಸಬೇಕಾದ ಮೊತ್ತ ರೂ. 9.42 ಕೋಟಿ ಇದು ಏಪ್ರಿಲ್ 2007 ರಿಂದ ಬಾಕಿ ಇರುತ್ತದೆ.

(ಇ) ಬಾಕಿ ಉಳಿಸಿಕೊಂಡಿರುವ ಕಬ್ಬಿನ ಬಿಲ್ಲಿನ ಮೊತ್ತವನ್ನು ಪಾವತಿಸಲು ಕಾರ್ಖಾನೆಗಳು ಕ್ರಮ ತೆಗೆದುಕೊಂಡಿರುತ್ತದೆ.

(ಈ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಸಕ್ಕರೆಯನ್ನು ಮಾರಾಟ ಮಾಡಿ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಕಾರ್ಖಾನೆಗಳು ಕ್ರಮ ವಹಿಸಿವೆ.